**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಹಾಸನ.**

**ಃ ಎಸ್.ಸಿ. ಸಂಖ್ಯೆಃ 21/2024 ಃ**

**(ಸದರಿ ಎಸ್.ಸಿ. 21/2024ಕ್ಕೆ ಎಸ್.ಸಿ. ಸಂಖ್ಯೆ:79/2024 ನ್ನು ಸೇರಿಸಿರುವುದರಿಂದ ದಿನಾಂಕ 18-09-2024 ರಂದು ಎಸ್.ಸಿ. ಸಂಖ್ಯೆ:79/2024 ನ್ನು ಅಂತ್ಯಗೊಳಿಸಿದೆ)**

**ಪಿರ್ಯಾದುದಾರರು** ಃ ರಾಜ್ಯದ ಪರವಾಗಿಃ
ಗಂಡಸಿ ಪೋಲೀಸ್ ಠಾಣೆ.

**ವಿರುದ್ಧ**

**ಆರೋಪಿತ/ರು** ಃ

1. ನಾಗೇಶ ಬಿನ್ ಲಕ್ಕೇಗೌಡ, 31 ವರ್ಷ ವಯಸ್ಸು,
2. ಲಕ್ಕೇಗೌಡ ಉಃ ರಾಜಣ್ಣ ಬಿನ್ ತಿಮ್ಮೇಗೌಡ, ಸುಮಾರು 65 ವರ್ಷ ವಯಸ್ಸು,
3. ವನಜಾಕ್ಷಿ ಕೋಂ ಲಕ್ಕೇಗೌಡ, 55 ವರ್ಷ ವಯಸ್ಸು,
4. ಶ್ವೇತ ಕೋಂ ಹರೀಶ, 34 ವರ್ಷ ವಯಸ್ಸು,

ಎಲ್ಲರೂ ವಾಸಃ ಜಕ್ಕನಹಳ್ಳಿ ಗ್ರಾಮ, ಗಂಡಸಿ ಹೋಬಳಿ, ಅರಸೀಕೆರೆ ತಾಲ್ಲೂಕು, ಹಾಸನ ಜಿಲ್ಲೆ.

**ಶ್ರೀ ದೊಡ್ಡೇಗೌಡ ಕೆ.**, 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಹಾಸನ, ಆದ ನಾನು ನಿಮ್ಮ ವಿರುದ್ಧ ಹೊರೆಸಿರುವ ದೋಷಾರೋಪಣೆ ಏನೆಂದರೆಃ

**ದೋಷಾರೋಪಣೆ**

**1.** ಮೊದಲನೆಯದಾಗಿ,ಅರಸೀಕೆರೆ ತಾಲ್ಲೂಕು, ಗಂಡಸಿ ಹೋಬಳಿ, ಜಕ್ಕನಹಳ್ಳಿ ಗ್ರಾಮದ 1ನೇ ಆರೋಪಿಯಾದ ನಿಮಗೆ ಸಾಕ್ಷಿ.1 ರವರ ಮಗಳು ಮೃತೆ ಗೀತಾಳನ್ನು ಈಗ್ಗೆ 3 ವರ್ಷಗಳ ಹಿಂದೆ ದಿನಾಂಕ 30/08/2020 ರಂದು ಮದುವೆ ಮಾಡಿಕೊಟ್ಟಿದ್ದು, ಮೃತೆ ಗೀತಾಳಿಗೆ ಒಂದು ಹೆಣ್ಣು ಮಗು ಜನಿಸಿದ್ದು, ಬಾಣಂತನ ಮುಗಿದ ನಂತರ ಮಗಳನ್ನು 1ನೇ ಆರೋಪಿಯಾದ ನಿಮ್ಮ ಮನೆಗೆ

ಬಿಡಲು ಹೋದಾಗ ನೀವು ಮದುವೆ ಸಮಯದಲ್ಲಿ ಏನು ವರದಕ್ಷಿಣೆಯನ್ನು ಕೊಟ್ಟಿರುವುದಿಲ್ಲವೆಂದು ಆರೋಪಿಗಳಾದ ನೀವುಗಳೆಲ್ಲರೂ ಸೇರಿಕೊಂಡು ಸಮಾನ ಉದ್ದೇಶದಿಂದ ಸಾಕ್ಷಿ-1 ಮತ್ತು ಸಾಕ್ಷಿ-5ರವರೊಂದಿಗೆ ಜಗಳ ಮಾಡಿದ್ದು, ಆಗಾಗ ಮೃತೆ ಗೀತಾಳಿಗೆ ವರದಕ್ಷಿಣೆ ತರುವಂತೆ ಕಿರುಕುಳ ನೀಡುತ್ತಿದ್ದು, ವರದಕ್ಷಿಣೆ ತೆಗೆದುಕೊಂಡು ಬಾ ಅಂತಾ ಹೊಲದಲ್ಲಿ, ಹೆಚ್ಚು ಕೆಲಸ ಮಾಡಿಸಿ ಸರಿಯಾಗಿ ಊಟ ತಿಂಡಿ ನೀರು ಕೊಡದೆ ತುಂಬಾ ಕಿರುಕುಳ ನೀಡುತ್ತಿದ್ದು, ದಿನಾಂಕ 26/07/2023 ರಂದು ಗಂಡಸಿ ಪೊಲೀಸ್ ಠಾಣಾ ವ್ಯಾಪ್ತಿಯ ಜಕ್ಕನಹಳ್ಳಿ ಗ್ರಾಮದ ಮಂಗಳೂರು ಹಂಚಿನ 1ನೇ ಆರೋಪಿಯಾದ ನಿಮ್ಮ ಹಳೆ ಮನೆಯೊಳಗೆ ಸಂಜೆ 04-30 ಗಂಟೆ ಸಮಯದಲ್ಲಿ, ಆರೋಪಿಗಳಾದ ನೀವೆಲ್ಲರೂ ಸೇರಿಕೊಂಡು ಸಮಾನ ಉದ್ದೇಶದಿಂದ ಮೃತೆ ಗೀತಾ ರವರಿಗೆ ಸರಿಯಾಗಿ ಊಟ ತಿಂಡಿ ನೀರು ಕೊಡದೇ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ಕಿರುಕುಳ ನೀಡಿ, ಆ ಮೂಲಕ ಆರೋಪಿಗಳಾದ ನೀವು **ಭಾ.ದಂ.ಸಂ. ಕಲಂ.498(ಎ) ಸಹವಾಚಕ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಎಸಗಿರುವಿರಿ.

**2.** ಎರಡನೆಯದಾಗಿ ಮೇಲೆ ಹೇಳಿದ ಸಂದರ್ಭದಲ್ಲಿ, ಮೃತೆ ಗೀತಾಳಿಗೆ ಆರೋಪಿಗಳಾದ ನೀವುಗಳು ವರದಕ್ಷಿಣೆ ಹಣವನ್ನು ತೆಗೆದುಕೊಂಡು ಬಾ ಎಂದು ಬೇಡಿಕೆ ಇಟ್ಟಿದ್ದು, ಆ ಮೂಲಕ ಆರೋಪಿಗಳಾದ ನೀವು **ವರದಕ್ಷಿಣೆ ನಿಷೇಧ ಕಾಯ್ದೆ ಕಲಂ.4** ರಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಎಸಗಿರುವಿರಿ.

**3.** ಮೂರನೆಯದಾಗಿ ಮೇಲೆ ಹೇಳಿದ ಸಂದರ್ಭದಲ್ಲಿ, ಆರೋಪಿಗಳಾದ ನೀವುಗಳು ಸಮಾನ ಉದ್ದೇಶದಿಂದ ನೀಡುತ್ತಿದ್ದ ಕಿರುಕುಳವನ್ನು ಮೃತೆ ಗೀತಾರವರು ತಾಳಲಾರದೆ ದಿನಾಂಕ 26/07/2023 ರಂದು ಸಂಜೆ 04-30 ಗಂಟೆಗೆ ಮನೆ ಪಕ್ಕದ ಮಂಗಳೂರು ಹಂಚಿನ ಹಳೆ ಮನೆಗೆ ಹೋಗಿ ಮಾನಸಿಕವಾಗಿ ನೊಂದು ಆರೋಗ್ಯದಲ್ಲಿ ಏರುಪೇರಾಗಿ ಮೃತಪಟ್ಟಿದ್ದು, ಆ ಮೂಲಕ

ಆರೋಪಿಗಳಾದ ನೀವು **ಭಾ.ದಂ.ಸಂ. ಕಲಂ.304(ಬಿ) ಸಹವಾಚಕ 34** ರಡಿಯಲ್ಲಿ ದಂಡನೀಯ ಅಪರಾಧವನ್ನು ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಎಸಗಿರುವಿರಿ.

ಮೇಲೆ ಹೇಳಿದ ಆರೋಪವು ನನ್ನ ಸಂಜ್ಞೆಗೆ ಒಳಪಡುತ್ತದೆ ಹಾಗೂ ಆರೋಪಿತ/ರಾದ ನೀವು/ಗಳು ಮೇಲೆ ಹೇಳಿದ ಆರೋಪಕ್ಕೆ ಅಧಿವಿಚಾರಣೆಗೆ ಒಳಪಡಬೇಕೆಂದು ಈ ಮೂಲಕ ಆದೇಶಿಸಲಾಗಿದೆ.

**(ದೊಡ್ಡೇಗೌಡ ಕೆ.)**

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಹಾಸನ.

ದಿನಾಂಕಃ 06-07-2026